3.2.2 2022

❁

# ಬೆರಳ್ಗೆ-ಕೊರಳ್ ಮತ್ತು ಶೂದ್ರ ತಪಸ್ವಿ ನಾಟಕಗಳ ಅವಲೋಕನ

-ಡಾ. ರಾಜಶೇಖರ ಎಸ್. ದಾನರಡ್ಡಿ

ಕುವೆಂಪು ಎಂಬ ಕಾವ್ಯ ನಾಮದಿಂದ ಪ್ರಸಿದ್ಧಿ ಪಡೆದ ಕವಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ಕನ್ನಡದ ಅಗ್ರಮಾನ್ಯ ಕವಿ. ಇಪ್ಪತ್ತನೆ ಶತಮಾನಕಂಡ ಅದ್ಭುತ ದೈತ್ಯ ಪ್ರತಿಭೆ ಯುಗದ ಕವಿ ಜಗದ ಕವಿ ಎಂದೆ ಕರೆಸಿಕೊಂಡವರು. ನಾಡೋಜ, ಕರ್ನಾಟಕ ರತ್ನ ಇನ್ನು ಮುಂತಾದ ಬಿರುದುಗಳಿಗೆ ಪಾತ್ರರಾದವರು. ಎರಡನೆ ರಾಷ್ಟ್ರಕವಿಯಾಗಿ, ವಿಶ್ವಮಾನವ ಸಂದೇಶವನ್ನು ಸಾರಿದವರು. ಜ್ಞಾನಪೀಠ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪ್ರಥಮ ಬಾರಿಗೆ ಕನ್ನಡಕ್ಕೆ ತಂದುಕೊಟ್ಟರು. ಇವರ ಸಾಹಿತ್ಯ ಹರವು ಸಹ ವಿಸ್ತಾರವಾದುದು. ಕಾವ್ಯ, ಕಥೆ, ನಾಟಕ, ವಿಮರ್ಶೆ, ವೈಚಾರಿಕ ಸಾಹಿತ್ಯ, ಮಕ್ಕಳ ಸಾಹಿತ್ಯ ಹೀಗೆ ಹಲವಾರು ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಗೈದಿರುವರು. ಪ್ರಸ್ತುತ ನಾವಿಲ್ಲಿ ಕುವೆಂಪು ಅವರ ಎರಡು ನಾಟಕಗಳಾದ ಬೆರಳ್ಗೆಕೊರಳ್ ಮತ್ತು ಶೂದ್ರತಪಸ್ವಿ ಎನ್ನುವ ನಾಟಕಗಳನ್ನು ಸ್ವಲ್ಪಮಟ್ಟಿಗೆ ಅವಲೋಕಿಸಬಹುದಾಗಿದೆ.

ಕುವೆಂಪು ಅವರ ನಾಟಕಗಳನ್ನು ಅಭ್ಯಾಸ ಸೌಕರ್ಯಕ್ಕಾಗಿ ಮೂರು ವಿಧವಾಗಿ ವಿಂಗಡಿಸಬಹುದಾಗಿದೆ.

೧. ಪುರಾಣ ಕಥೆಯೊಂದರ ಮೌಲ್ಯವನ್ನು ಸಂಪೂರ್ಣವಾಗಿ ಆಧುನಿಕ ನೆಲೆಯಲ್ಲಿ ಪರೀಕ್ಷಿಸುವ ನಾಟಕಗಳು. ಉದಾ : ಬೆರಳ್ಗೆಕೊರಳ್, ಶೂದ್ರತಪಸ್ವಿ

೨. ಪುರಾಣ ಕಥೆಯೊಂದನ್ನು ವಿಶೇಷ ಮಾರ್ಪಾಡಿಲ್ಲದೆ ಮಾನವೀಯ ನೆಲೆಯಲ್ಲಿ ವಿವೇಚಿಸುವುದು. ಇಲ್ಲಿ ಅತಿಮಾನುಷ ಸಂಗತಿಗಳಿದ್ದರೂ ಮಾನವೀಯ ವಿವರಗಳಿಗೆ ಹೆಚ್ಚು ಪ್ರಾಧಾನ್ಯ ಉದಾ : ಯಮನ ಸೋಲು, ವಾಲ್ಮೀಕಿಯ ಭಾಗ್ಯ, ಚಂದ್ರಹಾಸ, ಸ್ಮಶಾನ ಕುರುಕ್ಷೇತ್ರ, ಮಹಾರಾತ್ರಿ.

೩. ಪುರಾಣ ಕಥೆಗಳ ಮಾದರಿ ಅಥವಾ ಪುರಾಣ ಕಥಾಮೂಲ ಪ್ರತಿ (Archetype) ಯೆಂಬಂತಹ ವಸ್ತುವನ್ನು ಹೊಂದಿರುವ ನಾಟಕಗಳು. ಉದಾ : ಜಲಗಾರ, ಬಲಿದಾನ, ನನ್ನ ಗೋಪಾಲ, ಮೋಡಣ್ಣನ ತಮ್ಮ

ಕುವೆಂಪುರವರು ತಮ್ಮ ನಾಟಕಗಳ ವಸ್ತುವಿಗೆ ಪುರಾಣ ಕಥೆಗಳನ್ನು ಆಶ್ರಯಿಸಿದ್ದರೂ ಅವುಗಳನ್ನು ಸಮಕಾಲೀನ ನೆಲೆಯಿಂದಲೇ ಅರ್ಥವಿಸುತ್ತಾರೆಂಬುದನ್ನು ನಾವು ಮರೆಯಬಾರದು. ಸಂವೇದನಾಶೀಲನಾದ ಯಾವುದೇ ಲೇಖಕ ತನ್ನ ಕಾಲ-ದೇಶ-ಪರಿಸರದಲ್ಲಿ ನೆಲೆಯೂರಿ ನಿಂತೇ ಅನುಭವಗಳಿಗೆ ಸ್ಪಂದಿಸುತ್ತಾನೆ.

ಒಂದು ಸಾಹಿತ್ಯ ಕೃತಿಯ ವಸ್ತು-ರೂಪಗಳಿಗಿರುವ ಸಂಬಂಧ ಅಖಂಡವಾದುದು. ಜೀವ ಮತ್ತು ದೇಹದ ಸಂಬಂಧವಿದ್ದಂತೆ ಅವೆರಡನ್ನೂ ಪ್ರತ್ಯೇಕಿಸಿ ವಿಮರ್ಶಿಸಲು ಸಾಧ್ಯವೇ ಇಲ್ಲ. ಎಷ್ಟೇ ಗಹನವಾದ ವಿಚಾರವಿರಲಿ ನಾಟಕದಂತಹ ಸಾಹಿತ್ಯ ಪ್ರಕಾರದಲ್ಲಿ ದೃಶ್ಯರೂಪಿಯಾಗಿ ಅದು ಜೀವ ಪಡೆಯಬೇಕಾಗುತ್ತದೆ.

ಬೆರಳ್ಗೆ ಕೊರಳ್ ನಾಟಕವು ಗುರುತತ್ವ, ಕರ್ಮತತ್ವ ಮತ್ತು ಯಜ್ಞತತ್ವ ಎನ್ನುವ ಮೂರು ಭಾಗಗಳನ್ನು ಹೊಂದಿದೆ. ಮೊದಲನೆ ಭಾಗವು ಏಕಲವ್ಯನ ವ್ಯಕ್ತಿತ್ವವನ್ನು ನಿರೂಪಿಸುವುದರೊಂದಿಗೆ ಅನಾವರಣಗೊಳ್ಳುತ್ತದೆ. ಕುವೆಂಪು ಅವರ ಬೆರಳ್ಗೆ ಕೊರಳ್ ನಾಟಕಕ್ಕೆ ಇಟ್ಟಿರುವ ಹೆಸರೇ ಧ್ವನಿಪೂರಿಸುವಂತಹುದು. ನಾಟಕ ಪ್ರಪಂಚಕ್ಕೆ ಕುವೆಂಪು ನೀಡಿರುವ ಅಪೂರ್ವ ಕಾಣಿಕೆ ಬೆರಳ್ಗೆ-ಕೊರಳ್. ಈ ನಾಟಕದಲ್ಲಿ ಏಕಲವ್ಯನಿಗೆ ತಂದೆ-ತಾಯಿಗಳಿದ್ದಾರೆ. ಅಬ್ಬೆಯು ಏಕಲವ್ಯನ ಬದುಕಿನಲ್ಲಿ ಮಹತ್ತರ ಪಾತ್ರವಾಡಿದ್ದಾಳೆ. ಏಕಲವ್ಯ ದ್ರೋಣಾಚಾರ್ಯರ ಬಳಿಯಲ್ಲಿರುವಾಗ ಅವನ ತಂದೆಯು ಹುಲಿಗಾಹುತಿಯಾಗುತ್ತಾನೆ. ಏಕಲವ್ಯ ತುಂಬಾ ಚುರುಕಾಗಿದ್ದನು. ಆತನ ಬಾಲ್ಯ ತುಂಟತನದಿಂದ ಕೂಡಿದ್ದಾಗಿತ್ತೆಂದು ಅಬ್ಬೆಯ ಸಂವಾದದಲ್ಲಿ ತಿಳಿದು ಬರುತ್ತದೆ. ಏಕಲವ್ಯನು ನಿಸರ್ಗದ ಒಡನಾಡಿಯಾಗಿ ಮೂಡಿ ಬಂದಿದ್ದಾನೆ. ಪ್ರಕೃತಿಯನ್ನು ಆರಾಧಿಸುವಾತ, ಸಾಧು ಪ್ರಾಣಿಗಳ ಸಂರಕ್ಷಕ, ಪಕ್ಷಿ ಸಂಕುಲವನ್ನು ಪ್ರೀತಿಸುವಾತ, ಮಾತೆಯನ್ನು ಗೌರವಿಸುವಾತ ಇತ್ಯಾದಿಯಾಗಿ ಏಕಲವ್ಯನ ಬಾಲ್ಯದ ವಿವಿಧ ಮುಖಗಳು ತೆರೆದುಕೊಳ್ಳುತ್ತದೆ. ನಿಸರ್ಗದ ಆರಾಧನೆ ನವೋದಯ ಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಸ್ವತಃ ಕವಿ ಕುವೆಂಪು ಅವರೇ ಪ್ರಕೃತಿಯ ಆರಾಧಕರಾಗಿದ್ದರು. ಅವರ ಬಾಲ್ಯದ ನೆನಪುಗಳೇ ಏಕಲವ್ಯನ ಮೂಲಕವಾಗಿ ಮರುಹುಟ್ಟು ಪಡೆದಿವೆ.

ಏಕಲವ್ಯ ಅರಣ್ಯದಿಂದ ಹಸ್ತಿನಾವತಿಗೆ ಪಯಣಿಸಿದ ಪ್ರಸಂಗ ತೀರಾ ಚುಟುಕಾಗಿ ಬಂದಿದೆ. ತನ್ನ ತಂದೆ ಹಿರಣ್ಯಧನುವಿನಿಂದ ಗುರುಮಹಿಮೆಯನ್ನು ಅರಿತುಕೊಂಡ ಏಕಲವ್ಯ ದ್ರೋಣಾಚಾರ್ಯರ ಬಳಿಯಲ್ಲಿ ವಿದ್ಯಾಭ್ಯಾಸ ಮಾಡುವ ಮಹತ್ವಕಾಂಕ್ಷೆಯಿಂದ ತಂದೆಯಿಂದ ಬೀಳ್ಕೊಂಡು ಹಸ್ತಿನಾವತಿಗೆ ಹೊರಡುತ್ತಾನೆ. ಈ ಪ್ರಸಂಗವನ್ನು ಸಿಂಹಾವಲೋಕನ ಕ್ರಮದಿಂದ ಕುವೆಂಪು ಅವರು ಧ್ವನಿಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಹಸ್ತಿನಾವತಿಗೆ ಬಂದ ಏಕಲವ್ಯನಿಗೆ ಗುರುಪುತ್ರನಾದ ಅಶ್ವತ್ಥಾಮನ ಪರಿಚಯವಾಗುತ್ತದೆ. ಆತನೇ ತನ್ನ ತಂದೆ ದ್ರೋಣಾಚಾರ್ಯರ ಬಳಿಗೆ ಕರೆದುಕೊಂಡು ಹೋಗಿ ಅವರ ಭೇಟಿ ಮಾಡಿಸುತ್ತಾನೆ. ಏಕಲವ್ಯ ಮೊಟ್ಟ ಮೊದಲಬಾರಿಗೆ ದ್ರೋಣರನ್ನು ಕಂಡ ಅನುಭವ ಅದ್ಭುತವಾಗಿದೆ. "ಏನ್‌ತೇಜಮೋ ಆಚಾರ್ಯನದು । ತಳತಳಿಪ ಆಯುಧಗಾರಮಂ ಪೊಕ್ಕವೋಲಾಯ್ತು ನನಗಾತನಂ ಕಂಡು" ಎಂದು ಅಬ್ಬೆಗೆ ತನ್ನ ಅನುಭವವನ್ನು ವಿವರಿಸುತ್ತಾನೆ.

ಅಶ್ವತ್ಥಾಮ ಪರಿಚಯಿಸಿದ ಏಕಲವ್ಯನ ಪೂರ್ವಾಪರವನ್ನು ದ್ರೋಣರು ಅರಿತುಕೊಳ್ಳುತ್ತಾರೆ. ಏಕಲವ್ಯ ನಮಸ್ಕರಿಸಲು ದ್ರೋಣಾಚಾರ್ಯರು ಹಿಡಿದೆತ್ತಿ ಮೈದಡವುತ್ತಾರೆ. ಅಶ್ವತ್ಥಾಮನಿಗೆ "ನಿನ್ನ ಸ್ನೇಹಿತನೆಂದು ತಿಳಿ"ಯೆಂದು ತಿಳಿಸುತ್ತಾರೆ. ಈ ಕೃತಿಯಲ್ಲಿ ಏಕಲವ್ಯನಿಗೆ ದ್ರೋಣರ ಬಳಿ ಬರುವವರೆಗೆ ಹೆಸರೇ ಇರಲಿಲ್ಲ. ಆತನ ತಾಯಿ 'ಬಚ್ಚ' ಎಂದು ಕರೆಯುತ್ತಿದ್ದಳು. ಆ ಹೆಸರಿನಿಂದಲೇ ಏಕಲವ್ಯ ತನ್ನನ್ನು ಪರಿಚಯಿಸಿಕೊಳ್ಳುತ್ತಾನೆ. ದ್ರೋಣಾಚಾರ್ಯರು 'ಬಚ್ಚ' ಎಂದೊಡನೆ ಸರ್ವರೂ ನಗುತ್ತಿರುವುದನ್ನು ನಿವಾರಿಸಲು 'ಏಕಲವ್ಯ'ನೆಂಬ ನಾಮಕರಣ ಮಾಡುತ್ತಾರೆ. ಅಂದಿನಿಂದ ಬಚ್ಚ ಏಕಲವ್ಯನಾಗಿ ಪರಿವರ್ತಿತನಾಗುತ್ತಾನೆ. ನಿಷಾದ ಬಾಲಕನಿಗೆ ದ್ರೋಣಾಚಾರ್ಯರು 'ಏಕಲವ್ಯ'ನೆಂದು ನಾಮಕರಣ ಮಾಡಿರುವುದು ಹೊಸದಾಗಿದೆ. ಏಕಲವ್ಯನನ್ನು ಶಿಷ್ಯನೆಂದು ಸ್ವೀಕರಿಸಿದ ದ್ರೋಣರು ಎಲ್ಲರೊಂದಿಗೆ ಆತನಿಗೂ ಬಿಲ್ವಿದ್ಯೆ ಕಲಿಸಲಾರಂಭಿಸುತ್ತಾರೆ. ಕ್ಷತ್ರಿಯ ಕುಮಾರರು ಅಸೂಯೆಗೊಂಡು 'ಶೂದ್ರನೊಡನೆಮಗೆ ಸಮಚರ್ಯೆಸಲ್ಲದು' ಎಂದು ವಿರೋಧಿಸುತ್ತಾರೆ. ಆಗ ಗುರು ದ್ರೋಣರು ಅವರಿಗೆಲ್ಲ ತಿಳುವಳಿಕೆಯನ್ನು ನೀಡುತ್ತಾರೆ. ಆದರೆ ಅರಸು ಕುಮಾರರು ದ್ರೋಣರ ಉಪದೇಶ ಕೇಳದೆ ನಿರ್ದಾಕ್ಷಿಣ್ಯವಾಗಿ ಏಕಲವ್ಯನನ್ನು ಹೊರದೂಡುತ್ತಾರೆ. ಈ ಘಟನೆಯಿಂದ ಮನನೊಂದ ಏಕಲವ್ಯನನ್ನು ಗುರುದ್ರೋಣರು ಸಾಂತ್ವನಗೊಳಿಸಿ ಸ್ವತಃ ತಮ್ಮ ಮನೆಯಲ್ಲಿಯೇ ಇರಿಸಿಕೊಂಡು ಅಶ್ವತ್ಥಾಮನೊಡನೆ ವಿದ್ಯಾಭ್ಯಾಸಮಾಡಿಸುತ್ತಾರೆ.

ಕುವೆಂಪು ಅವರ ದ್ರೋಣರು ಏಕಲವ್ಯನ ಮೇಲೆ ಅಪಾರ ಶಿಷ್ಯವಾತ್ಸಲ್ಯದ ಮಳೆಗರೆಯುವದನ್ನು ಕಾಣುತ್ತೇವೆ. ಇಲ್ಲಿನ ದ್ರೋಣರು ಸುಸಂಸ್ಕೃತರು ಹುಟ್ಟಿನಿಂದ ವ್ಯಕ್ತಿ ಏನೆ ಆಗಿರಲಿ ಅವನು ಬಯಸಿದರೆ ಅವನಿಗೆ ವಿದ್ಯಾದಾನ ಮಾಡಬೇಕು ಎಂಬ ನಿಲುವನ್ನು ತಾಳಿದವರು.

ಏಕಲವ್ಯ ಹಸ್ತಿನಾವತಿಯಲ್ಲಿದ್ದು ಕಲಿಯಲು ಸಾಧ್ಯವಾಗುವದಿಲ್ಲ. ಅವನ ತಂದೆ ಹಿರಣ್ಯಧನು ಕಾಡಿನಲ್ಲಿ ಬೇಟೆಯಾಡುವಾಗ ಹುಲಿಗಾಹುತಿಯಾಗುತ್ತಾನೆ. ಆ ದುರ್ಮರಣದ ದುರ್ವಾರ್ತೆ ಏಕಲವ್ಯನಿಗೆ ತಲುಪಿಸುತ್ತದೆ. ತಕ್ಷಣ ಕಾಡಿಗೆ ಓಡಿ ಹೋಗುತ್ತಾನೆ. ಒಬ್ಬಂಟಿಗನಾದ ಏಕಲವ್ಯ ಏಕಾಂಗಿಯಾಗಿರುವ ತನ್ನ ತಾಯಿಯನ್ನು ಘೋರಾರಣ್ಯದಲ್ಲಿ ಬಿಟ್ಟು ಬರಲಾಗುವದಿಲ್ಲ. ಅಲ್ಲಿಯೇ ತಾಯಿಯ ಬಳಿಯಿರುತ್ತಾನೆ. ಹೀಗಾಗಿ ಕಲಿಕೆ ಅರ್ಧಕ್ಕೆ ನಿಲ್ಲುತ್ತದೆ. ಅದಕ್ಕಾಗಿ ತಾನಿರುವ ಕಾಡಿನಲ್ಲಿಯೇ ದ್ರೋಣರ ಕಲ್ಲಿನ ಪ್ರತಿಮೆಯೊಂದನ್ನು ನಿರ್ಮಿಸಿ ಅದನ್ನು ಉಚ್ಚ ಸ್ಥಾನದಲ್ಲಿ ಪ್ರತಿಷ್ಠಾಪಿಸಿ ಶ್ರದ್ಧೆ, ನಿಷ್ಠೆಯಿಂದಿ ಮತ್ತು ಏಕಾಗ್ರತೆಯಿಂದ ಶಸ್ತ್ರ ವಿದ್ಯಾಭ್ಯಾಸವನ್ನು ಮುಂದುವರಸಿ ಅದ್ಭುತವಾದ ಜ್ಞಾನವನ್ನು ಸಂಪಾದಿಸುತ್ತಾನೆ. ಅಜ್ಜಿ ಕುತೂಹಲಗೊಂಡು "ಕಲ್‌ಗೊಂಬೆಯದು ಕಲಿಪುದೆಂತಯ್" ಎಂದು ಪ್ರಶ್ನಿಸುತ್ತಾಳೆ. ಏಕಲವ್ಯ ನೀಡುವ ಉತ್ತರ ಹೀಗಿದೆ. ಈ ಗುರು ಪ್ರತಿಮೆಯನ್ ದ್ರೋಣಂಗೆತ್ತು ಮುಂಬರಿಸಿದೆನ್ ಬಿಲ್ ಬಿಜ್ಜೆಯಭ್ಯಾಸಮಂ ಅಜ್ಜೆ, ಸೋಜಿಗವೆನಿಂಬೆ ಎಳ್ಚರ ಪೊಳ್ತು ನನಗರಿಯದ ಎಂತೆಂತಪ್ಪ ಬಿಜ್ಜೆಗಳೊ ಕೈ ಸಾರ್ಧುವೆನಗೆ ಶಬ್ದವೇದಿಯು ಮದರೊಳೊಂದು. ಇದು ಕುವೆಂಪು ಅವರು ಏಕಲವ್ಯನ ಮೂಲಕ ನೀಡಿದ ವಿವರಣೆ.

ಕುವೆಂಪು ಅವರಲ್ಲಿ ಏಕಲವ್ಯ ಶಬ್ದವೇಧಿ ಪ್ರಯೋಗಿಸಿದ ಪ್ರಸಂಗವು ಸ್ವಾರಸ್ಯಕರವಾಗಿದೆ. ನಿತ್ಯದಂತೆ ಏಕಲವ್ಯ ತನ್ನ ಅರಣ್ಯದಲ್ಲಿದ್ದಾನೆ. ಒಮ್ಮಲೆ ಬೇಟೆಗಾರರ ಅಬ್ಬರದಿಂದ ಕಾಡೆಲ್ಲಗದ್ದಲ ಸುರುವಾಗುತ್ತದೆ. ತನ್ನ ರಕ್ಷಣೆಯಲ್ಲಿರುವ ಕಾಡಿನಲ್ಲಿ ಬೇಟೆಯಾಡಲು ಬಂದವರ ಮೇಲೆ ಏಕಲವ್ಯನಿಗೆ ಕೋಪವುಕ್ಕಿ ಬರುತ್ತದೆ. ಬೇಟೆಗಾರರಿಗೆ ಎಚ್ಚರಿಕೆ ನೀಡಲೆಂದು ಬಿಲ್ಲು ಬಾಣಗಳನ್ನು ಸಜ್ಜುಗೊಳಿಸಿ ಅಬ್ಬರ ಬಂದತ್ತ ಹೆಜ್ಜೆ ಹಾಕಲಾರಂಭಿಸುತ್ತಾನೆ. ಮತ್ತು ಶಬ್ದ ಬಂದು ಕಡೆಗೆ ಗುರಿಯಿಟ್ಟು ಬಾಣವನ್ನು ಪ್ರಯೋಗಿಸುತ್ತಾನೆ. ಹಿಂದೊಮ್ಮೆ ಜರುಗಿದ ಘಟನೆಯನ್ನು ಇಂದು ಏಕಲವ್ಯ ತನ್ನಜ್ಜಿಗೆ ಕಥೆಯಾಗಿ ಹೇಳುತ್ತಿದ್ದಾನೆ. ಆಗವನ ತಾಯಿ ಕಣ್ಣಿಗೆ ಕಾಣದ ಹಂದಿಯನ್ನು ಹೇಗೆ ಹೊಡೆದುರುಳಿಸಿದೆ ? ಎಂದು ಸೋಜಿಗಗೊಂಡು ಕೇಳುತ್ತಾಳೆ. ಶಬ್ದವೇಧಿ ಎಂಬ ಬಿಜ್ಜೆಯಿಂದಜ್ಜೆ ! ಗುರಿಕಣ್ಗೆ ಕಾಣದಿರ್ದೊಡಂ ಎಚ್ಚಂಬು ತಗುಳ್ವುದು ಗುರಿಗವೋಘಂ ಅದೊಂದತೀಂದ್ರಿಯ ಸಾಮರ್ಥ್ಯ ಎಂದು ತಾಯಿಗೆ ತಿಳಿಸುತ್ತಾನೆ. ಏಕಲವ್ಯ ಮೂಲಕ ಶಬ್ದವೇಧಿ ವಿದ್ಯೆಯನ್ನು ಕುವೆಂಪುರವರು ಓದುಗರಿಗೆ ಪರಿಚಯಿಸಿದ್ದಾರೆ. ಬೇಟೆಯನ್ನು ಹುಡುಕುತ್ತಾ ಏಕಲವ್ಯ ಹಂದಿಯ ಬಳಿಗೆ ಬರುತ್ತಾನೆ. ಅಲ್ಲಿ ಅರ್ಜುನನಿರುವದನ್ನು ಕಾಣುತ್ತಾನೆ. ಇವರಿಬ್ಬರ ಮುಖಾಮುಖಿ ಪ್ರಸಂಗ ಕುವೆಂಪು ಅವರ ನಾಟಕದಲ್ಲಿ ತುಂಬಾ ಮಾರ್ಮಿಕವಾಗಿ ಬಂದಿದೆ ಅರ್ಜುನ "ಹಂದಿಗೆ ನಾಟಿದ ಬಾಣವ ನಟ್ಟಾಲಿಯಾಗಿ ನಿಟ್ಟಿಸುತಿರ್ದನ್" ಏಕಲವ್ಯ ಹೋಗುತ್ತಿದ್ದಂತೆಯೇ ಅರ್ಜುನ "ವನಚರ ಆರ್ ಎಚ್ಚರೀ ವರಾಮನ್" ಎಂದು ಏಕಲವ್ಯನನ್ನು ಪ್ರಶ್ನಿಸುತ್ತಾನೆ. "ನಾಗರಿಕ ಓದಿ ತಿಳಿ: ಕಲಿಪುದಾಬಾಣಾಕ್ಷರಂ" ಎಂದು ಏಕಲವ್ಯ ಉತ್ತರಿಸುತ್ತಾನೆ. ಇಲ್ಲಿಂದಲೇ ಮುಖಾಮುಖಿ ಆರಂಭವಾಗುತ್ತದೆ. ಮುಂದೆ ಅವರಿಬ್ಬರ ನಡುವೆ ಮಾತಿನ ಚಕಮುಕಿಯೇ ಆರಂಭವಾಗುತ್ತದೆ. ಇಲ್ಲಿ ಕಾಡಿನರಾಜ ಮತ್ತು ಮತ್ತು ನಾಡಿನ ರಾಜರ ನಡುವೆ ವರ್ಗಸಂಘರ್ಷವೇ ನಡೆಯುತ್ತದೆ. ಅರ್ಜುನನೊಡನೆ, ಸಂಭಾಷಣೆ ನಡೆಸುವಾಗ ಪ್ರಕಟವಾಗುವ ಏಕಲವ್ಯನ ಗುರುಭಕ್ತಿ ಆತ್ಮಸಂಸ್ಕೃತಿ ಅನಾದೃಶ್ಯವಾದುವು.

ಏಕಲವ್ಯ ಮತ್ತು ಅರ್ಜುನರ ಮುಖಾಮುಖಿಯಲ್ಲಿ ಎರಡು ಭಿನ್ನ ಸಂಸ್ಕೃತಿಗಳ ಅನಾವರಣವಾಗುತ್ತದೆ. ಸುಂದರ ಪರಿಸರ, ನಿಸರ್ಗಪ್ರೀತಿ, ನಯವಿನಯ, ಸರಳತೆ-ಸಹಜತೆ, ನಿರಹಂಕಾರ, ನಿರಾಡಂಬರ, ಅಪಾರ ಗುರುಭಕ್ತಿ, ಅನನ್ಯ ಮಾತೃಪ್ರೇಮ, ಹೃದಯ ವೈಶಾಲ್ಯಗಳು ಏಕಲವ್ಯನ ಮೂಲಕ ಬಿಚ್ಚಿಕೊಳ್ಳುತ್ತವೆ. ನಗರ-ನಗರದವರ ವರ್ತನೆ ಹೆಸರಿನ ಹುಚ್ಚು ಕೀರ್ತಿಯ ಭ್ರಮೆ, ದುಷ್ಟ, ಅಧಿಕಾರದ ಮದ, ಕುಲದ ಪ್ರತಿಷ್ಠೆ, ತಮ್ಮ ಶಕ್ತಿಯ ದುರಹಂಕಾರ ಅತಿ ಆಡಂಬರ, ತಾವೇಶ್ರೇಷ್ಠರು ಮುಂತಾದ ಗುಣಗಳು ಅರ್ಜುನನ ಮುಖಾಂತರ ತೆರೆದುಕೊಳ್ಳುತ್ತವೆ. ಕುವೆಂಪುರವರು ಈ ದೃಶ್ಯದಲ್ಲಿ ಕಾಡಿನ ಸಹಜ ಸಂಸ್ಕೃತಿಯನ್ನು ಹಾಗೂ ನಾಡಿನ ವಿಕೃತ ಸಂಸ್ಕೃತಿಯನ್ನು ಏಕಕಾಲದಲ್ಲಿಯೇ ನಿರೂಪಿಸಿದ್ದಾರೆ. ಇಲ್ಲಿಯ ಪ್ರಕೃತಿ ವ್ಯಾಪಾರವೆ ಒಂದು ಪಾತ್ರವೆಂಬಂತೆ ನಾಟಕದಲ್ಲಿ ಪಾಲ್ಗೊಳ್ಳುತ್ತದೆ.

ಕುವೆಂಪುರವರ ಬೆರಳ್ಗೆಕೊರಳ್ 'ಯಜ್ಞ'ವೆಂಬ ಮೂರನೆಯ ಅಂಕದಲ್ಲಿ ಏಕಲವ್ಯನ ಗುರುದಕ್ಷಿಣೆ ಪ್ರಸಂಗ ಬರುತ್ತದೆ. ಕಾಡಿಗೆ ಬಂದ ಗುರುಗಳನ್ನು ಆದರಿಸಿ ಸತ್ಕರಿಸಿದಾಗ ಗುರುದ್ರೋಣರು ಸಂತಸಗೊಳ್ಳುತ್ತಾರೆ. ಆದರೆ ತಾವು ಬಂದ ಕಾರಣ ನೆನೆದು ಸಂಕಟಪಡುತ್ತಾರೆ. ಏಕಲವ್ಯನಿಂದ ಏನಾದರೊಂದು ತಪ್ಪು ಮಾಡಿಸಿ ಆ ತಪ್ಪಿನಿಂದ ತಮ್ಮ ಕಾರ್ಯ ಸಾಧಿಸಿಕೊಳ್ಳಬೇಕೆಂದು ಹೊಂಚು ಹಾಕುತ್ತಾರೆ ಆದರೆ ಅದು ಸಾಧ್ಯವಾಗುವದಿಲ್ಲ. ತನ್ನ ಗುರುಗಳು ಯಾವುದೋ ವೇದನೆಯಲ್ಲಿರುವದನ್ನು ಏಕಲವ್ಯ ಗುರುತಿಸುತ್ತಾನೆ. ಏನೆಂದು ಏಕಲವ್ಯ ಒತ್ತಾಯಿಸುತ್ತಾನೆ. ಅರ್ಜುನನಿಗೆ ವಚನ ನೀಡಿದ್ದು ಏಕಲವ್ಯನಿಂದಾಗಿ ಅದು ಭಂಗವಾದ ಸಂಗತಿಯನ್ನು ದ್ರೋಣರು ವಿವರಿಸುತ್ತಾರೆ. ಇದನ್ನು ತಿಳಿದುಕೊಂಡ ಏಕಲವ್ಯ "ಮುಂತೆನಗೆ ಬೆಸಸು ಆಚಾರ್ಯ ಇತ್ತ ಗುರುವಿಂಗೀವುದೇನ್ ತ್ಯಾಗಮೆ ? ಪರಮ ಸಂಪದಮದುವೆ ಪುರುಷಾರ್ಥನಂ ! ನಿನ್ನಿಂದೆ ಕಲ್ತವಿದ್ಯಾಕ್ಷಮಂ, ಪಡೆವುದೆಲ್ಲಂ ಕೊಡುವುದಕ್ಕಲ್ತೆ ಅರ್ಥ ? ಮೇಣ್ ಪೂರ್ಣಮಂ ಕೊಡದೆ ಪಡೆದುದೆಂತು ಪೂರ್ಣಮಂ?" ಎಂದು ಏಕಲವ್ಯ ಸಂಕೋಚವಿಲ್ಲದೆ ಕೇಳಿಕೊಳ್ಳಬೇಕೆಂದು ನಿವೇದಿಸುತ್ತಾನೆ. ಕೊನೆಗೆ ಮೌನವನ್ನು ಮುರಿದು ದ್ರೋಣರು–

"ದಕ್ಷಿಣೆಗೆ ದಕ್ಷಿಣದ ಪೆರ್ಬೆರಲ್
ನಿನ್ನ ಬಿಲ್ ಬಿಜ್ಜೆಗುಸಿರಪ್ಪ ಆ ಪೆರ್ಬೆರಲ್
ಬಾಣಮಂ ಪಿಡಿದು ಸಿಂಜಿನಿ ಗುಯ್ವಪೆರ್ಬೆರಲ್"

ಎಂದು ಗುರುದಕ್ಷಿಣೆಗಾಗಿ ಬಲಗೈ ಹೆಬ್ಬೆರಳನ್ನು ನೀಡಬೇಕೆಂದು ಕೇಳುತ್ತಾರೆ. ಏಕಲವ್ಯ ಹೆಬ್ಬೆರಳನ್ನು ದಕ್ಷಿಣೆಯಾಗಿ ಹೇಗೆ ಕೇಳಬೇಕೆಂಬ ದ್ರೋಣರಲ್ಲಾಗುವ ಆಂತರಿಕ ಹೋರಾಟವನ್ನು ಕವಿಕುವೆಂಪು ಪದರು ಪದರಾಗಿ ತೋರಿಸಿದ್ದಾರೆ.

ಕಳೆದ ರಾತ್ರಿ ಕಂಡ ಕನಸಿನ ವೃತ್ತಾಂತವನ್ನು ನೆನಸಿಕೊಂಡ ಏಕಲವ್ಯ ಅದರ ಮುಂದೆ ಇದು ತೀರಾ ಕ್ಷುಲ್ಲಕವೆಂದುಕೊಳ್ಳುತ್ತಾನೆ. ಏಕಲವ್ಯ ಕಂಡ ಕನಸನ್ನು ಕೇಳಿ ತಿಳಿದುಕೊಂಡ ದ್ರೋಣಾಚಾರ್ಯರು ರೋಮಾಂಚನಗೊಳ್ಳುತ್ತ "ದೇವ ಕಾರ್ಯಕೆ ನೀನ್ ಅರ್ಪಿತಾತ್ಮನ್ ವತ್ಸ" ಎಂದು ಆಶೀರ್ವದಿಸುತ್ತಾರೆ. ಏಕಲವ್ಯ ಬತ್ತಳಿಕೆಯಲ್ಲಿರುವ ಅಗಲಬಾಯಿಯ ಬಾಣವೊಂದನ್ನು ತೆಗೆದುಕೊಂಡು ದ್ರೋಣ ಪ್ರತಿಮೆಯ ಮುಂದೆ ಕುಳಿತು ಬಲಗಯ್ಯ ಹೆಬ್ಬೆರಳನ್ನು ಕತ್ತರಿಸಿಕೊಂಡು

"ಕೊಳ್ ದಕ್ಷಿಣೆಯನ್ ಇದನ್ ! ಗೆಲ್ಗೆ ಧರ್ಮಂ !

ಗೆಲ್ಗೆ ದ್ವೈವೇಚ್ಛೆ । ನಿಮ್ಮ ವಚನಂ ನಿಲ್ಗೆ ।
ಮೇಣ್ ಅರ್ಜುನನ ಪೆರ್ ಬಯಕೆಯುಂ ಸಲ್ಗೆ"

ಎಂದು ಏಕಲವ್ಯ ತನ್ನ ಬೆರಳನ್ನು ಗುರುದಕ್ಷಿಣೆಯಾಗಿ ಬಲಿಕೊಡುತ್ತಾನೆ. ತುಂಡಾದ ಬೆರಳನ್ನು ಅಲ್ಲೇಬಿಟ್ಟು ಏಕಲವ್ಯ, ಗಾಯಕ್ಕೆ ಔಷಧಿ ಹಚ್ಚಲೆಂದು ಕಾಡು ಸೊಪ್ಪನ್ನು ತರಲು ಹೋಗುತ್ತಾನೆ. ಇಲ್ಲಿ ದ್ರೋಣಾಚಾರ್ಯರು "ಕ್ಷತ್ರಿಯಕುಮಾರ, ನಿನ್ನಸೊಯಾಗ್ನಿ ತಣಿಯಲಿದೋ ಬಿಯದ ಬಾಲಕನ ಈ ಬೆರಳ್ ಬೇಳ್ವೆ" ಎಂದು ತುಂಡರಿಸಿ ಬಿದ್ದಿರುವ ಬೆರಳನ್ನು ತಗೆಯಲು ಬಾಗುತ್ತಾನೆ. ಒಮ್ಮೆಲೆ ಬೆಚ್ಚಿಬಿದ್ದ ದ್ರೋಣರು ಅಯ್ಯೋ ಎಂದು ಕೂಗುತ್ತಾರೆ. ಏಕಲವ್ಯ ಗುರುಗಳ ಬಳಿಗೆ ಓಡೋಡಿ ಬರುತ್ತಾನೆ. ಗಡಗಡ ನಡಗುತ್ತಲಿರುವ ಗುರು ದ್ರೋಣರನ್ನು ಗಟ್ಟಿಯಾಗಿ ಹಿಡಿದು ಕೇಳುತ್ತಾನೆ. ಅದಕ್ಕೆ ದ್ರೋಣಾಚಾರ್ಯರು ಉತ್ತರಿಸಿದ್ದು ಹೀಗೆ ಕನ್ನಿರಕನ್ನಡಿಯೊಳಗೆ ನನ್ನ ಪೆಡಿನೆಳಲು ನನ್ನ ಮುಖ ವಿಕೃತಿಯನ್ನು ಕಂಡು ಬೆರಗಾಗಿ ಖಡ್ಗ ಮುಷ್ಟಿಯ ಭೀಮ ಹಸ್ತವೊಂದು ಎರಗಿ ನನ್ನ ಕೊರಳನ್ನು ಕತ್ತರಿಸಿ ಉರುಳಿಸಿದುದನ್ನು ಕಂಡೆ, ರುಂಡವಿಲ್ಲದ ಮುಂಡವನ್ನು ಕಂಡು ಬೆರಗಾಗಿ ನಿನ್ನ ಕೂಗಿಕರೆದೆ ಮುಂದೇನು ಕಾದಿದೆಯೊ ನನಗೆ, ವಿಧಿ ನಿನ್ನ ಬೆರಳಿಗಾಗಿ ನನ್ನ ಕೊರಳನ್ನು ಕೊಡಬೇಕಾಗಬಹುದು. ಎಂದು ತಾನು ಕಂಡದ್ದನ್ನು ದ್ರೋಣರು ಏಕಲವ್ಯನಿಗೆ ವಿವರಿಸುತ್ತಾರೆ. ಇದರಲ್ಲಿ ದ್ರೋಣಾಚಾರ್ಯರು ತಮ್ಮ ಭವಿಷ್ಯವನ್ನು ಕಂಡು ಕೊಂಡಿದ್ದಾರೆ. ಗುರು ದಕ್ಷಿಣೆಯನ್ನು ಕೇಳಿ ಪಡೆದುಕೊಂಡ ದ್ರೋಣಾಚಾರ್ಯ ತನ್ನ ಮಾನಸಿಕ ಕೊಲೆಯನ್ನು ತನ್ನ ಭವಿಷ್ಯವನ್ನು ತನ್ನ ಕಣ್ಣಾರೆ ಕಾಣುವಂತಾಗುತ್ತದೆ. ಶಿಷ್ಯನ ಬೆರಳಿಗೆ ತನ್ನ ಕೊರಳನ್ನು ಮೀಸಲಿಡಬೇಕಾದ ಪ್ರಸಂಗವು ಮನೋಹರವಾಗಿ ಮಾರ್ಗ ಮತ್ತು ಗುರಿ "End and Means" ಎರಡೂ ನ್ಯಾಯಬದ್ಧವಾಗಿ ಹೊಂದಿಕೊಳ್ಳುವಂತೆ ಈ ದುರಂತ ನಾಟಕವು ಗುರಿಯನ್ನು ಮುಟ್ಟುತ್ತದೆ.

ಏಕಲವ್ಯನಿಂದ ಗುರುದಕ್ಷಿಣೆಯನ್ನು ಪಡೆದ ದ್ರೋಣಾಚಾರ್ಯರು ಹಸ್ತಿನಾವತಿಗೆ ಹೊರಟು ಹೋಗುತ್ತಾರೆ. ಸಂಜೆಯ ಸಮಯ ಮಗನನ್ನು ಹುಡುಕಿಕೊಂಡು ಅಬ್ಬೆ ಬರುತ್ತಾಳೆ. ತಾಯಿ ಬರುವ ಮುಂಚೆಯೇ ರಕ್ತಸಿಕ್ತ ಬೆರಳನ್ನು ತೊಳೆಯಬೇಕೆಂದಿರುವ ಏಕಲವ್ಯನ ಸಂಕಲ್ಪ ಕೈಗೂಡುವದಿಲ್ಲ. ಏಕಲವನಲ್ಲಾದ ಪರಿವರ್ತನೆಯಿಂದಾಗಿ ಅಬ್ಬೆಗೆ ಸಂದೇಹವುಂಟಾಗುತ್ತದೆ ಮಡುಗಟ್ಟಿದ ಕನ್ನೆತ್ತರಿನಲ್ಲಿ ಹೆಬ್ಬೆರಳು ಕಾಣಿಸಿದಾಗ ಅಬ್ಬೆಯು ಕಳವಳಗೊಳ್ಳುತ್ತ" ಇದೇನ್‌ಬಚ್ಚು । ಕಡಿವೆರಳ್ । ಆರುದಿದು ? (ಎಂದು ಅಳುದನಿಯಿಂದ) ನಿನ್ನದೇನ್" ಎಂದು ಉದ್ವೇಗದಿಂದ ಪ್ರಶ್ನಿಸುತ್ತಾಳೆ. ಏಕಲವ್ಯ ತಾಯಿಯನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾನೆ. ಕಡಿದು ಬಿದ್ದಿರುವ ಆ ಬೆರಳು ಏಕಲವ್ಯನದೇ ಎಂದು ತಿಳಿಯುತ್ತಿದ್ದಂತೆಯೇ ಹೆತ್ತೊಡಲು ಹೊತ್ತಿಕೊಂಡು ಉರಿಯುತ್ತದೆ. ದುಃಖದ ಜೊತೆಗೆ ರೋಷವುಕ್ಕಿ ಬಂದು ಕೆರಳಿ ರುದ್ರಿಯಾಗಿ

"ಆರ್‍ಗೊ ಬರಿ ನನ್ನ ಕಂದನ ಬೆರಳ್
ಬಲಿಯಕ್ಕೆ ಆಪಾಪಿಯ ಕೊರಳ್"

ಎಂದು ಶಪಿಸುತ್ತಾಳೆ ಏಕಲವ್ಯ "ಬೇಡ ವೇಡ । ನಿಲ್ ! ನಿಲ್ !" ಎಂದು ತಡೆಯಲು ಪ್ರಯತ್ನಿಸುತ್ತಿರುವಾಗಲೇ ಅಬ್ಬೆಯು ದ್ರೋಣರನ್ನು ಶಪಿಸಿಬಿಟ್ಟಿದ್ದಾಳೆ. ದರ್ಶನ ದೀಪ್ರವಾದ ಕುವೆಂಪು ಪ್ರಭಾಮತಿ ಈ ಪುಟ್ಟ ಪ್ರಕರಣದಲ್ಲಿ ಅನೇಕ ಅದ್ಭುತಗಳನ್ನು ಕಂಡಿತು. ಮಮತೆಯ ಮಾತೆಯಾಗಿ ನಾವು ಆರಾಧಿಸುವ ಶಕ್ತಿಯೇ ವಿಧಿವಾಣಿಯು ಆಗಬಲ್ಲುದು ಎಂಬುದನ್ನು ಗೋಚರಗೊಳಿಸಲು ಏಕಲವ್ಯ ತಾಯಿಯ ಶಾಪವನ್ನು ಸೃಷ್ಟಿಸಿದರು.

ಆಚಾರ್ಯ ದ್ರೋಣನಿಗೆ. ಅದು ಬ್ರಾಹ್ಮಣನೊರ್ವನಿಗೆ ಶೂದ್ರ ಸ್ತ್ರೀಯೊಬ್ಬಳು ಶಾಪ ಹಾಕುವ ಕಲ್ಪನೆಯೇ ಹೊಸದೆನಿಸುತ್ತದೆ. ಮುನಿಗಳ 'ಶಾಪ' ರಾಮಾಯಣ, ಮಹಾಭಾರತ ವಿವಿಧ ಪುರಾಣಗಳಲ್ಲಿ ಸಾಲು ಸಾಲಾಗಿ ಸಿಕ್ಕುತ್ತವೆ. ಅಲ್ಲಿ ಪುರುಷರೇ ಶಪಿಸಿರುವುದನ್ನು ಕಾಣುತ್ತೇವೆ. ಶಾಪ ಕೊಡುವವರೆಲ್ಲರೂ ಉಚ್ಚ ವರ್ಗದವರು. ಸ್ತ್ರೀಯರು ಶಪಿಸುವ ಪ್ರಸಂಗಗಳೇ ಇಲ್ಲ. ಪುರುಷ ಪ್ರಾಧಾನ್ಯತೆ ಹಾಗೂ ವರ್ಣಾಶ್ರಮ ಸಮಾಜ ವ್ಯವಸ್ಥೆಯನ್ನಿದು ಬಿಂಬಿಸುತ್ತದೆ. ಅದಕ್ಕೆ ಕುವೆಂಪು ಬೆರಳ್ಗೆ ಕೊರಳ್‌ದಲ್ಲಿ ಮಾರ್ಪಾಡುಗೊಳಿಸಿದ್ದಾರೆ. ಅಂದರೆ ಪರಂಪರಾಗತ ನಂಬಿಕೆಗಳನ್ನು ಪ್ರಶ್ನಿಸಿದ್ದಾರೆ. ಕೆಳವರ್ಗದವರು ತನಗೆ ಅನ್ಯಾಯ ವಾದಾಗ ಮೇಲ್ವರ್ಗದವರನ್ನು ಶಪಿಸಬಹುದಾಗಿದೆ. ಸ್ತ್ರೀಯರೂ ಈ ಕಾರ್ಯಮಾಡಬಹುದು. ಸ್ತ್ರೀ–ಪುರುಷರನ್ನು ಸಮಾನತೆಯ ದೃಷ್ಟಿಯಿಂದ ಕಾಣುವ ಈ ಮಾತೃಶಾಪ ಕಲ್ಪನೆ ಅದ್ಭುತವಾಗಿದೆ.

ಶೂದ್ರ ತಪಸ್ವಿ ಕುವೆಂಪುರವರ ಪ್ರಸಿದ್ಧ ನಾಟಕ ಕೃತಿ. ಮೂಲ ರಾಮಾಯಣದ ಕಥೆ ಆಧರಿಸಿ ಅಲ್ಲ, ಸ್ವಲ್ಪ ಬದಲಾವಣೆಗಳೊಂದಿಗೆ ಈ ನಾಟಕವನ್ನು ಸಿದ್ಧಪಡಿಸಲಾಗಿದೆ. ಗುಣಕ್ಕೆ ಮಾತ್ಸರ್ಯ ಇರಬಾರದು. ಒಳ್ಳೆಯದು ಎಲ್ಲಿದ್ದರೂ ಅದನ್ನು ಗೌರವಿಸಬೇಕೆಂಬ ತತ್ತ್ವದ ಅಡಿಯಲ್ಲಿ ನಾಟಕ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ.

–ರಾಮಾಯಣದ ಉತ್ತರಾಕಾಂಡದಲ್ಲಿ ಬರುವ ಪ್ರಕ್ಷಿಪ್ತ ಭಾಗದಲ್ಲಿ ಬರುವ ಕಥೆ ಶಂಬೂಕ ವಧಾ ಪ್ರಸಂಗ.

–ರಾಮನು ರಾಜ್ಯಭಾರ ಮಾಡುವ ಸಂದರ್ಭದಲ್ಲಿ ಒಮ್ಮೆ ಬ್ರಾಹ್ಮಣನ ಮಗನು ಸತ್ತು ಹೋಗುತ್ತಾನೆ. ಇದಕ್ಕೆ ಕಾರಣ ಶೂದ್ರನೊಬ್ಬ ತಪಸ್ಸು ಮಾಡುವುದು ಎಂದು ಬ್ರಾಹ್ಮಣ ರಾಮನ ಬಳಿ ಬಂದು ಆರೋಪಿಸಿ ರಾಮರಾಜ್ಯದಲ್ಲಿ ತನ್ನ ಮಗು ಅಕಾಲಿಕ ಮರಣಕ್ಕೆ ತುತ್ತಾಗಿರುವುದರಿಂದ ನ್ಯಾಯ ಕೊಡಬೇಕೆಂದು ಪರಿಪರಿಯಾಗಿ ಬೇಡುತ್ತಾನೆ. ರಾಮ ಬ್ರಾಹ್ಮಣನ ಮನವೊಲಿಸಲು ಪ್ರಯತ್ನಿಸಿ ಸೋಲುತ್ತಾನೆ.

–ಕಡೆಗೆ ಶೂದ್ರ ತಪಸ್ವಿ ತಪಸ್ಸು ಮಾಡುವ ಜಾಗಕ್ಕೆ ಬ್ರಾಹ್ಮಣನೊಂದಿಗೆ ರಾಮನೂ ಬಂದು, ಅವನ ಮನಸ್ಸಿನ ಸಮಾಧಾನಕ್ಕೋಸ್ಕರ ಶೂದ್ರ ತಪಸ್ವಿಯನ್ನು ಸಂಹರಿಸಲು ಮುಂದಾಗಿ ಬಾಣವನ್ನು ಹೂಡುತ್ತಾನೆ. ಆದರೆ ಆ ಬಾಣ ಶೂದ್ರ ತಪಸ್ವಿಯನ್ನು ಪ್ರದಕ್ಷಿಣೆ ಹಾಕಿ, ಬ್ರಾಹ್ಮಣನನ್ನು ಕೊಲ್ಲಲು ಧಾವಿಸಿದಾಗ, ಬ್ರಾಹ್ಮಣ ಕಂಗಾಲಾಗುತ್ತಾನೆ. ನಂತರ ರಾಮನ ಅನುಜ್ಞೆಯಂತೆ ಶೂದ್ರ ತಪಸ್ವಿಗೆ ವಂದಿಸುತ್ತಾನೆ. ತನ್ನ ಪ್ರಾಣ ಮತ್ತು ಮಗುವಿನ ಪ್ರಾಣ ಎರಡನ್ನು ಕಾಪಾಡಿಕೊಳ್ಳುತ್ತಾನೆ.

**ಶೂದ್ರ ತಪಸ್ವಿ :**

೧೯೪೪ ರಲ್ಲಿ ಕುವೆಂಪು 'ಶೂದ್ರ ತಪಸ್ವಿ' ನಾಟಕಕ್ಕೆ ರಾಮಾಯಣದ ಒಂದು ತುಣುಕನ್ನು ಕಥೆಯಾಗಿ ಆಯ್ದುಕೊಂಡಿದ್ದಾರೆ. ಶೂದ್ರ ತಪಸ್ವಿ ನಾಟಕ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಹುಮುಖ್ಯವಾಗಿದ್ದು ಶೋಷಿತರ ಗಟ್ಟಿದನಿಯಾಗಿ ಹೊರಹೊಮ್ಮುತ್ತಲೇ ಅಂದಿನ ಮೇಲ್ವರ್ಗದ ಘಟಾನುಘಟಿ ಸಾಹಿತಿ, ಟೀಕಾಕಾರರ ವಾಗ್ದಾಳಿ ಮತ್ತು ಅಸಡ್ಡೆಗಳನ್ನು ಧೂಳಿಪಟ ಮಾಡಿ ಒಂದು ಅದ್ಭುತ ಕೃತಿಯಾಗಿ, ಕೆಳವರ್ಗದ ಜನತೆಯ ಆತ್ಮಸ್ಥೈರ್ಯವಾಗಿ ನಿಂತಿದೆ.

ಶೂದ್ರ ಶಂಬೂಕನ ತಲೆ ಉರುಳಿಸುವ ಮೂಲ ರಾಮಾಯಣ : ಮೂಲ ರಾಮಾಯಣ ಕಾವ್ಯದಲ್ಲಿ ಶ್ರೀರಾಮ ಸೀತೆಯನ್ನು ಕಾಡಿಗಟ್ಟಿದ ನಂತರ ವೃದ್ಧ ಬ್ರಾಹ್ಮಣನೊಬ್ಬ ತನ್ನ ಮೃತ ಬಾಲಕನನ್ನು ಹೊತ್ತು ತಂದು ರಾಮನ ಅರಮನೆಯ ಮುಂದೆ ಗೋಳಿಡುತ್ತಾನೆ. ರಾಮ ರಾಜ್ಯದಲ್ಲಿ ಶೂದ್ರ ಶಂಬೂಕನು ತಪಸ್ಸು

ಕೊಡುವುದಿದ್ದರೆ ಬ್ರಹ್ಮಾಸ್ತ್ರವನ್ನೇ ಕೊಡಬೇಕು ಎಂದು ಬ್ರಾಹ್ಮಣ ಪಟ್ಟು ಹಾಕುತ್ತಾನೆ. ಕುವೆಂಪು ರಾಮನ ಜಿಜ್ಞಾಸೆಯನ್ನು ಇಲ್ಲಿ ಪರಿಹರಿಸುವ ಪರಿಯೇ ವಿಶಿಷ್ಟ. ತಾನು ಹೂಡುವ ಬ್ರಹ್ಮಾಸ್ತ್ರ ಅಧರ್ಮದ ವಿರುದ್ಧ ಹೋರಾಡಲಿ ಎನ್ನುತ್ತಾ ರಾಮ ಶಸ್ತ್ರ ಹೂಡುತ್ತಾನೆ. ಬ್ರಹ್ಮಾಸ್ತ್ರವು ಶಂಬೂಕ ತಪಸ್ವಿಯ ಬಳಿ ತೆರಳಿ ತಪೋಮಹಿಮೆಗೆ ನಮಿಸುತ್ತದೆ. ನಂತರ ಬ್ರಾಹ್ಮಣನೆಡೆಗೆ ತಿರುಗಿ ಧಾವಿಸತೊಡಗಿದಾಗ ಅಧರ್ಮಿ ಯಾರು ಎಂಬುದು ಬ್ರಾಹ್ಮಣನಿಗೆ ಅರಿವಾಗಿ ರಕ್ಷಣೆಗಾಗಿ ಬೊಬ್ಬಿಡುತ್ತಾನೆ.

ಅಂತಿಮವಾಗಿ ಬ್ರಹ್ಮಾಸ್ತ್ರವನ್ನು ಹಿಂಪಡೆಯುವ ವೇಳೆಗೆ ಬಾಲಕ ಬ್ರಾಹ್ಮಣನನ್ನು ಹುಡುಕುತ್ತಾ ಬರುತ್ತಾನೆ. ತನ್ನ ತಾತನೊಂದಿಗೆ ಹೂವು ತರಲು ಕಾಡಿಗೆ ಬಂದ ತಾನು ಮೂರ್ಛೆ ಹೋಗಿ ಪ್ರಜ್ಞೆ ಬರುವಷ್ಟರಲ್ಲಿ ದಾರಿ ತಪ್ಪಿದೆ ಎನ್ನುತ್ತಾನೆ ಬಾಲಕ. ಬಾಲಕ ಮತ್ತು ಬ್ರಾಹ್ಮಣರಿಬ್ಬರು ಶೂದ್ರ ಶಂಬೂಕ ತಪಸ್ಸಿಗೆ ನಮಿಸುವ ದೃಶ್ಯದೊಂದಿಗೆ ನಾಟಕ ಮುಕ್ತಾಯಗೊಳ್ಳುತ್ತದೆ. ಮೂಲ ರಾಮಾಯಣದಲ್ಲಿ ಶೂದ್ರ ಶಂಬೂಕನ ಮೇಲೆ ಧಾಳಿ ಮಾಡಿ ಜೀವ-ವಿರೋಧಿಯಂತೆ ರಾಮ ಅವನನ್ನು ಕೊಂದಿದ್ದರೆ, ಇಲ್ಲಿ ಕುವೆಂಪುರವರ ರಾಮ ಜೀವ-ಪರನಂತೆ, ಸತ್ಯದ ಅಸ್ತ್ರವಿಡಿದು ಮನಃಪರಿವರ್ತನೆಗೆ ಸಾಕ್ಷಿಯಾಗುತ್ತಾನೆ.

ಶೂದ್ರ ತಪಸ್ವಿಯಲ್ಲಿ ಬರುವ ಧಾರ್ಮಿಕ ವಿಚಾರಶೀಲತೆ. ಇಲ್ಲಿ ಬ್ರಾಹ್ಮಣ-ಶೂದ್ರ ಪ್ರಶ್ನೆಗಳು ಧರ್ಮಾಧರ್ಮದ ಪ್ರಶ್ನೆಯಾಗಿ ರಾಮನಿಗೆ ಉದ್ಭವಿಸುತ್ತವೆ. ಇದನ್ನು ಅರಿತ ರಾಮ, ಬ್ರಾಹ್ಮಣನಿಗೆ ತಮ್ಮ ಮೇಲು ಕೀಳುಗಳ ಅಹಮಿಕೆಯ ಅರಿವೆಯನ್ನು ಮನವರಿಕೆಯಾಗುವಂತೆ ಮಾಡುತ್ತಾನೆ. ಇಲ್ಲಿ ಬ್ರಾಹ್ಮಣ ಮತ್ತು ಶಂಬೂಕ ಇಬ್ಬರ ಘನತೆ, ಧರ್ಮದ ಔನತ್ಯ ಮಾತು ಶ್ರೀ ರಾಮನ ಮಹೋನ್ನತ ವ್ಯಕ್ತಿತ್ವ ಏಕಕಾಲಕ್ಕೆ ಅನಾವರಣವಾಗುವಂತೆ ಕುವೆಂಪುರವರು ವ್ಯಾಖ್ಯಾನಿಸುವ ರೀತಿಯಲ್ಲಿ ಅದರ ವೈಚಾರಿಕತೆ ಹೊಮ್ಮುತ್ತದೆ.

**ನಾಟಕದ ವಿಶೇಷತೆ :**

ನಾಟಕದ ಪ್ರಾರಂಭದಿಂದ ಕೊನೆಯವರೆಗೂ ಶಂಭೂಕ ಮುನಿ ಒಂದು ಪಾತ್ರವಾಗಿ ಪ್ರತ್ಯಕ್ಷವಾಗಿ ಕಾಣಿಸಿಕೊಳ್ಳುವದಿಲ್ಲ. ಆದರೆ ಇಡೀ ನಾಟಕವನ್ನು ಆವರಿಸಿಕೊಂಡಿರುವುದು ಶಂಬೂಕಮುನಿಯೇ. ನಾಟಕದ ಪ್ರತಿಯೊಂದು ನಡೆಗೆ ಶಂಭೂಕನೆ ಕಾರಣ. ಭೈರವ ಮತ್ತು ಮೃತ್ಯುಗಳ ಕಾದಾಟಕ್ಕೆ ಬ್ರಾಹ್ಮಣ ಮಗನಸಾವಿಗೆ, ಬ್ರಾಹ್ಮಣ ರಾಮನಿಗೆ ದೂರು ನೀಡುವದಕ್ಕೆ ರಾಮ ಬ್ರಹ್ಮಾಸ್ತ್ರ ಪ್ರಯೋಗಿಸಲಿಕ್ಕೆ ಕೊನೆಗೆ ಬ್ರಾಹ್ಮಣನಿಗೆ ಜ್ಞಾನೋದಯವಾಗಲಿಕ್ಕೆ ಶಂಬೂಕನೆ ಕಾರಣ. ಅಧ್ಯಾತ್ಮದಲ್ಲಿ ತೀವ್ರ ಆಸಕ್ತರಾದ ಕುವೆಂಪುರವರಿಗೆ ತಪಸ್ಸಿನ ಅಗಾಧ ಶಕ್ತಿಯ ಅರಿವಿತ್ತು ಮತ್ತು ಆತ್ಮೋದ್ಧಾರದ ಮತ್ತು ಜಗದೋದ್ಧಾರಕ್ಕೆ ತಪಸ್ಸು ಅಗತ್ಯ ಎನ್ನುವದನ್ನು ವಾಲ್ಮೀಕಿ ಬುದ್ಧ, ವಿವೇಕಾನಂದ ಮೊದಲಾದವರು ಸಾಧಿಸಿ ತೋರಿಸಿದರು. ಈ ನಾಟಕದಲ್ಲಿ ಸಹ ಶಂಭೂಕ ಮುನಿಯ ತಪಃ ಪ್ರಭಾವವನ್ನು ಜ್ವಾಜ್ವಲ್ಯಮಾನವಾಗಿ ಬೆಳಗಿಸಿದ್ದಾರೆ.

**ತಪಂ ಪೂಜ್ಯ ಕರ್ಮಂ । ತಪಕ್ಕೆಣೆಯುಂಟೆ ।**

**ತಪಂ ತಾನಿರ್ಪೆಡೆಯೊಳ್ ದೂರಕರ್ಮಿ ।**

ಮೊದಲಾದ ಸಾರ್ವಕಾಲಿಕ ಸತ್ಯಗಳನ್ನು ಹೇಳುತ್ತಾ ತಪಸ್ಸನ್ನು ಯಾರೆ ಮಾಡಲಿ ಅಂತಹವನು ಪೂಜಾರ್ಹ ಎಂದು ಈ ನಾಟಕದ ಮುಖೇನ ತಿಳಿಸಿದ್ದಾರೆ. ಇಲ್ಲಿ ಮೂರ್ಖತನಕ್ಕೆ ಅವಿವೇಕಕ್ಕೆ ಜಾತಿ ಭ್ರಾಂತಿಗೆ, ಶಾಸ್ತ್ರಮೌಢ್ಯಕ್ಕೆ ಸೋಲುಂಟಾಗಿ, ಕಲಿಕೆಗೆ, ತಪಸ್ಸಿಗೆ, ಜ್ಞಾನಕ್ಕೆ ಜಯವಾಗಿದೆ. ಶಾಸ್ತ್ರ ಸಂಭ್ರಾತನಾದ ಬ್ರಾಹ್ಮಣನೊಬ್ಬ ಶೂದ್ರ ತಪಸ್ಸಿಗೆ ಮಣಿಯುವದೇ ಈ ನಾಟಕದ ಶ್ರೇಷ್ಠತೆ.

ಇಲ್ಲಿ ಬ್ರಾಹ್ಮಣ ಮತ್ತು ಶಂಬೂಕ ಇವರ ಘನತೆ, ಧರ್ಮದ ಔನ್ನತ್ಯ ಮತ್ತು ಶ್ರೀರಾಮನ ಮಹೋನ್ನತ ವ್ಯಕ್ತಿತ್ವ ಏಕ ಕಾಲದಲ್ಲಿಯೇ ಅನಾವರಣವಾಗುವಂತೆ ಕುವೆಂಪುರವರು ವ್ಯಾಖ್ಯಾನಿಸುವ ರೀತಿಯಲ್ಲಿ ಅವರ ವೈಚಾರಿಕತೆ ಹೊರಹೊಮ್ಮುತ್ತದೆ.

"ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು"

ಎಂದು ಕುವೆಂಪು ವೇದ, ಶಾಸ್ತ್ರಗಳಿಗೆಲ್ಲ ಒರೆವುಕಟ್ಟ ಮನದ ಮಾತಿಗೆ ಮಾನ್ಯತೆ ನೀಡಿದವರು. ಶಂಭೂಕಮುನಿ ವಧಾ ಪ್ರಸಂಗದಲ್ಲಿರುವ ಲೋಪ ದೋಷಗಳನ್ನು ತಿದ್ದಿ ಶಂಬೂಕ ವಧೆಯನ್ನು ಶೂದ್ರತಪಸ್ವಿಯಾಗಿ ಮಾರ್ಪಡಿಸಿದರು.

**ಎರಡೂ ನಾಟಕಗಳ ಸಮೀಕ್ಷೆ :**

ವರ್ಣ ಸಂಘರ್ಷವನ್ನು ಅತ್ಯಂತ ಪ್ರಖರವಾಗಿ ಚಿತ್ರಿಸುವ 'ಶೂದ್ರತಪಸ್ವಿ' ಮತ್ತು 'ಬೆರಳ್‌ಗೆ ಕೊರಳ್' ನಾಟಕಗಳು ರಾಮಾಯಣ ಮತ್ತು ಮಹಾಭಾರತ ಕಾಲದ ವರ್ಣಭೇದ ನೀತಿಯನ್ನೇ ಕುರಿತಿದ್ದರೂ ಸಮಕಾಲೀನವಾಗಿಯೂ ಮಹತ್ವ ಪಡೆಯಲು ಕಾರಣ, ಹಿಂದೂ ಸಮಾಜದ ಪಾತ್ರಾಪಾತ್ರತೆ ಹಾಗೂ ಮೇಲುಕೀಳಿನ ಕಲ್ಪನೆಗಳು ಇಂದಿಗೂ ಮೂಲಭೂತವಾಗಿ ವ್ಯತ್ಯಾಸವಾಗದೆ ಉಳಿದಿರುವುದು. ಬಿಲ್ವಿದ್ಯೆಯಲ್ಲಿ ಕ್ಷತ್ರಿಯನಂತೆ ಪರಿಣತನಾಗಿದ್ದ ಏಕಲವ್ಯ, ವೈದಿಕರಂತೆ ತಪಸ್ಸು ಮಾಡುತ್ತಿದ್ದ ಶಂಭೂಕರಿಬ್ಬರೂ ಆಯಾ ಕಾಲದ ಪ್ರತಿಷ್ಠಿತರಿಗೆ ಸವಾಲುಗಳಾಗಿದ್ದವರು. ವಿದ್ಯೆ, ಪರಾಕ್ರಮಗಳೆರಡರ ಸಾಧನಗಳನ್ನು ಕೇಂದ್ರೀಕರಿಸುವುದರ ಮೂಲಕ ಅಧಿಕಾರವನ್ನು ಮೇಲು ವರ್ಣದವರು ಉಳಿಸಿಕೊಂಡಿದ್ದರು. ಕ್ಷತ್ರಿಯರಿಗೆ ಉಚಿತವೆಂದು ಪರಿಗಣಿಸಿದ್ದ ಬಿಲ್ವಿದ್ಯೆಯನ್ನು ಏಕಲವ್ಯನೂ ಬ್ರಾಹ್ಮಣರಿಗೆ ಮಾತ್ರ ಮೀಸಲಿದ್ದ ತಪಸ್ಸನ್ನು ಶಂಭೂಕನೂ ಬಯಸಿದ್ದು, ಸಾಧಿಸಿದ್ದು – ಅಂದಿನ ಸಮಾಜದಲ್ಲಿ ಬುಡಮೇಲು ಸತ್ಯವೇ ಆಗಿ ಕಂಡು ಬಂದಿದೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಯಾವುದೆ ಪ್ರತಿಭೆಯನ್ನೂ ಹುಟ್ಟಿನಿಂದಲೇ ಸಹಜವಾಗಿ ದತ್ತವಾದುದು ಎಂದು ಗುರುತಿಸಲಾಗುತ್ತದೆ. ಈ ನಂಬಿಕೆಗಳನ್ನು ಒಪ್ಪದವರನ್ನು ಗಡಿರೇಖೆಗಳನ್ನು ದಾಟಲು ಹೋದವರನ್ನು ಸಮಾಜದ ಪ್ರತಿಷ್ಠಿತರು ಬಲಿ ತೆಗೆದುಕೊಳ್ಳುತ್ತಾರೆ. ಮಹಾಭಾರತದ ಮೂಲವನ್ನು ಅನುಸರಿಸಿ 'ಬೆರಳ್‌ಗೆ ಕೊರಳ್' ನಾಟಕದಲ್ಲಿಯೂ ಏಕಲವ್ಯನ ಬೆರಳು ಕತ್ತರಿಸಲಾಗಿದೆಯಾದರೂ, ದ್ರೋಣರ ಪಾತ್ರರಚನೆಯಲ್ಲಿ ಮತ್ತು ನಾಟಕದ ದುರಂತ ದರ್ಶನದಲ್ಲಿ ಕುವೆಂಪುರವರ ಸ್ವಂತಿಕೆಯಿದೆ.

'ಶೂದ್ರತಪಸ್ವಿಯಲ್ಲಿ' ಶಂಭೂಕನ ಕಥೆಯನ್ನು ಸಂಪೂರ್ಣವಾಗಿ ಮಾರ್ಪಡಿಸಿ ರಾಮನನ್ನು ನ್ಯಾಯಪರ ಆದರ್ಶ ಪುರುಷನಾಗಿ ಕಲ್ಪಿಸಿಕೊಳ್ಳಲಾಗಿದೆ. ರಾಮಾಯಣದ ಕಥಾ ಚೌಕಟ್ಟಿದ್ದರೂ, 'ಶೂದ್ರತಪಸ್ವಿ' ಕುವೆಂಪುರವರ ಸ್ವಂತ ಕಲಾಕೃತಿ ವಸ್ತು, ಪಾತ್ರರಚನೆ, ಮೌಲ್ಯ ಪ್ರತಿಪಾದನೆಗಳೆಲ್ಲದರಲ್ಲಿಯೂ ಈ ಸ್ವಂತಿಕೆಯನ್ನು ನಿಚ್ಚಳವಾಗಿ ಗುರುತಿಸಬಹುದು. ಆದರೂ ಏಕಲವ್ಯನ ದುರಂತ ನಮ್ಮನ್ನು ಕಾಡಿದಂತೆ ಶಂಭೂಕನ ಗೆಲುವು ಸಂತೋಷಗೊಳಿಸುವುದಿಲ್ಲ. 'ಶೂದ್ರ ತಪಸ್ವಿ'ಯ ರಚನಾ ಕ್ರಮದಲ್ಲಿ ಅಳವಟ್ಟಿರುವ ವ್ಯಂಗ್ಯವೇ ನಮ್ಮನ್ನು ಹೆಚ್ಚು ಆಕರ್ಷಿಸುವ ವಿಚಾರ.

**'ದುಷ್ಟ ಶಿಕ್ಷೆ** : ಶಿಷ್ಟ ಪರಿಪಾಲನೆ'ಯೆಂಬ ಪೌರಾಣಿಕ ಆಶಯ ಇಲ್ಲಿ ಮೈದಾಳಿರುವ ರೀತಿ ರಾಮಾಯಣದ ಪೂರ್ಣಕಥೆಗೆ ಸಂಪೂರ್ಣ ವ್ಯತಿರಿಕ್ತವಾಗಿರುವುದು ಇಲ್ಲಿನ ವ್ಯಂಗ್ಯವಾಗಿದೆ. ರಾಮಾಯಣದಲ್ಲಿ ಶೂದ್ರ

ತಪಸ್ವಿ ಶಂಭೂಕ ದುಷ್ಟನಾಗಿದ್ದು ಅವನ ತಕ್ಕಂತೆ ಅಳ್ವಿನ ಕಲ್ಪನೆ. ಕುವೆಂಪುರವರ 'ಶೂದ್ರ ತಪಸ್ವಿ'ಯಲ್ಲಿ ವಿಪ್ರವರೇಣ್ಯನೇ ಖಳನಾಯಕನೂ ಪರಮ ದುಷ್ಟನೂ ಆಗಿ ಕಂಡು ಬರುತ್ತಾನೆ. ನಮ್ಮ ಪುರಾಣ ಗಳಲ್ಲೆಲ್ಲಾ ರಾಕ್ಷಸರು, ಚಾಂಡಾಲರು ಮುಂತಾದವರು ಮಾತ್ರ ದುಷ್ಟರಾಗಿದ್ದು, ವೇದಪಾರಂಗತ ವಿಪ್ರರು, ಪರಾಕ್ರಮಿಗಳಾದ ಕ್ಷತ್ರಿಯರು ಉಜ್ವಲರಾಗಿ ಗೋಚರಿಸುತ್ತಾರೆ. ಕುವೆಂಪುರವರ 'ಬೆರಳ್‌ಗೆ ಕೊರಳ್' ಮತ್ತು 'ಶೂದ್ರತಪಸ್ವಿ'ಗಳಲ್ಲಿ ಈ ವರ್ಗವೇ ಖಳನಾಯಕನ ಗುಣದಲ್ಲಿ ಶೋಭಿಸುತ್ತಿದೆಯಾದರೂ ಅವರಲ್ಲಿ ನಾಯಕರಾಗಿದ್ದ ದ್ರೋಣಾಚಾರ್ಯ, ಶ್ರೀ ರಾಮನಂತಹವರ ಬಗ್ಗೆ ಕುವೆಂಪು ಉದಾರವಾಗಿದ್ದಾರೆ. ಆದರೂ ಇಂಥ ಕಡೆ ಪುರಾಣ ಕಥೆಗಳು ಆಧುನಿಕ ನೆಲದಲ್ಲಿ ಮರುಹುಟ್ಟು ಪಡೆದಿವೆ. ಎರಡೂ ನಾಟಕಗಳಲ್ಲಿಯೂ ಕಾಲ, ಕ್ರಿಯೆ ಮತ್ತು ಸ್ಥಳಗಳ ಐಕ್ಯವನ್ನು ಅತ್ಯಂತ ಸಮರ್ಥವಾಗಿ ಕಾಪಾಡಿಕೊಳ್ಳಲಾಗಿದೆ. ಅರ್ಧ ದಿನದ ಕಥಾ ವ್ಯಾಪ್ತಿಯನ್ನುಳ್ಳ ಈ ನಾಟಕಗಳ ಪಾತ್ರರಚನಾ ಪರಿಣತಿ ಮೇಲುಮಟ್ಟದ್ದು, ಸಂಭಾಷಣೆಗಳು ಪಾತ್ರ ಸ್ವಭಾವವನ್ನು ತೆರೆದು ತೋರಿಸುತ್ತಿವೆ.

**ಆಕರಗಳು :**


೧. ಬೆರಳ್ಗೆಕೊರಳ್ (ನಾಟಕ) ಕುವೆಂಪು

೨. ಕನ್ನಡ ಸಾಹಿತ್ಯದಲ್ಲಿ ಏಕಲವ್ಯ ಸಂಶೋಧನಾ ಪ್ರಬಂಧ ಡಾ. ಅಶೋಕ ನರೋಡೆ.

೩. ಕರ್ನಾಟಕ ಭಾರತಿ ಸಂಚಿಕೆ-೬೦